■ ವಿಶಾಖ ಎನ್.



# ಬಾಲಿವುಡ್ ಸೋಲು
# ಮಾಧವನ್ ಹೀಗಂತಾರೆ

ಕಾಲಚಕ್ರ ತಿರುಗುತ್ತದೆ. 'ಥ್ರೀ ಈಡಿಯಟ್ಸ್' ಚಿತ್ರದಲ್ಲಿ ಅಮೀರ್ ಖಾನ್ ಸಹನಟ ಆಗಿದ್ದ ಮಾಧವನ್ ಇತ್ತೀಚೆಗೆ ತೆರೆಗೆ ತಂದ 'ರಾಕೆಟ್ರಿ–ನಂಬಿಯಾರ್ ಎಫೆಕ್ಟ್' ಸಿನಿಮಾ ಗಲ್ಲಾಪೆಟ್ಟಿಗೆಯಲ್ಲಿ ಒಂದು ಮಟ್ಟಕ್ಕೆ ಸದ್ದು ಮಾಡಿದೆ. ಇನ್ನೊಂದೆಡೆ, ಅಮೀರ್ ಮಹತ್ವಾಕಾಂಕ್ಷೆಯ 'ಲಾಲ್ ಸಿಂಗ್ ಚಡ್ಡಾ' ಮಕಾಡೆಯಾಗಿದೆ. ಅದನ್ನು ನಿಷೇಧಿಸಿ ಸಾಮಾಜಿಕ ಜಾಲತಾಣದಲ್ಲಿ ನಡೆದ ಅಭಿಯಾನವು ಫಲ ನೀಡಿತೆಂದೇ ಅನೇಕರು ಸುಖಿಸುತ್ತಿರುವುದು ಮಾಧವನ್ ಕಣ್ಣಿಗೂ ಬಿದ್ದಿದೆ.

ಈ ಬೆಳವಣಿಗೆಯನ್ನು ಮಾಧವನ್ ಹೆಚ್ಚು ತಲಸ್ಪರ್ಶಿಯಾಗಿ ನೋಡದೆ, ತಮ್ಮದೇ ಆದ ರೀತಿಯಲ್ಲಿ ವಿಶ್ಲೇಷಿಸಿದ್ದಾರೆ: 'ಕೋವಿಡ್ ಪೂರ್ವದ ಸ್ಥಿತಿಗೂ ಈಗಿನದಕ್ಕೂ ವ್ಯತ್ಯಾಸವಿದೆ. ಜನರು ವಿಶ್ವದ ಹಲವು ಬಗೆಯ ಸಿನಿಮಾಗಳಿಗೆ ಹಿಂದೆಂದಿಗಿಂತಲೂ ಹೆಚ್ಚು ತೆರೆದುಕೊಂಡಿದ್ದಾರೆ. ಈ ಕಾಲಘಟ್ಟದಲ್ಲಿ ಯಾವ ವಸ್ತುವಿನ ಚಿತ್ರ ಕ್ಲಿಕ್ ಆಗುತ್ತದೆ ಎನ್ನುವುದು ಕೆಲವೊಮ್ಮೆ ಊಹೆಗೂ ನಿಲುಕದ ಸಂಗತಿಯಾಗುತ್ತದೆ. ದೊಡ್ಡ ಬಜೆಟ್‌ನ ಸಿನಿಮಾ ಮಾಡುವವರು ಮಹತ್ವಾಕಾಂಕ್ಷೆಯಿಂದ, ಹೆಚ್ಚು ಶ್ರದ್ಧೆಯಿಂದಲೇ ಚಿತ್ರಗಳನ್ನು ಮಾಡುತ್ತಾರೆನ್ನುವುದು ನಿಸ್ಸಂಶಯ. ಲಾಲ್ ಸಿಂಗ್ ಚಡ್ಡಾ ತಯಾರಾದದ್ದೂ ಹಾಗೆಯೇ. ನಾನು ಮಾಡಿದ 'ರಾಕೆಟ್ರಿ ನಂಬಿಯಾರ್' ಆತ್ಮಕಥೆ ಆಧರಿಸಿದ್ದು. ಹೀಗಾಗಿ ಅದು ಎಲ್ಲ ಕಾಲಕ್ಕೂ ಸಲ್ಲುತ್ತದೆ. ಬಹುಶಃ ಈ ಕಾರಣದಿಂದಾಗಿಯೇ ಹೆಚ್ಚು ಜನ ಅದನ್ನು ನೋಡಿದರು. ಜನ ಯಾವ ಚಿತ್ರಗಳನ್ನು ಹೆಚ್ಚಾಗಿ ನೋಡಲು ಈಗ ಇಷ್ಟಪಡುತ್ತಾರೆ ಎನ್ನುವ ನಾಡಿಮಿಡಿತ ಅರಿಯಲು ಸ್ವಲ್ಪ ಸಮಯ ಬೇಕಾಗುತ್ತಿದೆ. ಇದನ್ನು ಹಿಂದಿ ಚಿತ್ರರಂಗ ಬೇಗ ಅರ್ಥ ಮಾಡಿಕೊಳ್ಳಲಿದೆ'.

ದಕ್ಷಿಣ ಭಾರತದ ಚಿತ್ರಗಳ ಪ್ರಾಬಲ್ಯದಿಂದಾಗಿ ಹಿಂದಿ ಸಿನಿಮಾಗಳು ಸೊರಗಿವೆ ಎನ್ನುವ ವಾದವನ್ನು ಮಾಧವನ್ ಒಪ್ಪುವುದಿಲ್ಲ. ಐದಾರು ಚಿತ್ರಗಳು ಭಾರತದ ಮಟ್ಟಿಗೆ ವಿವಿಧ ರಾಜ್ಯಗಳಲ್ಲಿ ಸದ್ದು ಮಾಡಿದ ಮಾತ್ರಕ್ಕೆ ದಕ್ಷಿಣ ಭಾರತದ ಚಿತ್ರರಂಗವೇ ಉತ್ತುಂಗಕ್ಕೆ ಏರಿದೆ ಎನ್ನುವ ಅಭಿಪ್ರಾಯಕ್ಕೆ ಬರಲಾಗದು ಎನ್ನುವುದು ಅವರ ಅನಿಸಿಕೆ. 'ಕೆಜಿಎಫ್2', 'ಪುಷ್ಪಾ', 'ಆರ್‌ಆರ್‌ಆರ್', 'ಬಾಹುಬಲಿ' ತರಹದ ಕೆಲವು ಸಿನಿಮಾಗಳಷ್ಟೆ ಹಿಂದಿ ಚಿತ್ರಗಳನ್ನೂ ಮೀರಿದ ಮಟ್ಟಕ್ಕೆ ಸದ್ದು ಮಾಡಿರುವುದು ಎನ್ನುವ ಅವರು, ಸದ್ಯಕ್ಕೆ 'ಧೋಖಾ ರೌಂಡ್ ದಿ ಕಾರ್ನರ್' ಎಂಬ ಚಿತ್ರವನ್ನು ತೆರೆಗೆ ತರುವ ಕೆಲಸದಲ್ಲಿ ಬ್ಯುಸಿಯಾಗಿದ್ದಾರೆ. ■

# ಅನುರಾಗ್ ಚಿತ್ರದಲ್ಲಿ ಸನ್ನಿ

ಪೂಜಾ ಭಟ್ 'ಜಿಸ್ಮ್' ಚಿತ್ರದಲ್ಲಿ ಅವಕಾಶ ಕೊಟ್ಟ ಸಂದರ್ಭವನ್ನು ಸನ್ನಿ ಲಿಯೋನ್ ಇವತ್ತಿಗೂ ನೆನಪಿನಲ್ಲಿ ಇಟ್ಟುಕೊಂಡಿದ್ದಾರೆ. ಅವರು ಹಿಂದಿ ಚಿತ್ರರಂಗ ಪ್ರವೇಶಿಸಿ ಹತ್ತು ವರ್ಷಗಳು ಉರುಳಿವೆ. ಈಗ ತಾವು ಸಾಕಷ್ಟು ಬದಲಾಗಿರುವುದಾಗಿ ಹೇಳಿಕೊಳ್ಳುವ ಅವರು ಹೊಸ ಅವಕಾಶವನ್ನು ಯಾರೇ ಕೊಟ್ಟರೂ ಮೊದಲಿನ ಉತ್ಸಾಹದಲ್ಲೇ ಅಭಿನಯಿಸುವುದಾಗಿ ಹೇಳಿದ್ದಾರೆ.

ಅನುರಾಗ್ ಕಶ್ಯಪ್ ಇತ್ತೀಚೆಗೆ ಸನ್ನಿ ಅವರನ್ನು ಸ್ಕ್ರೀನ್ ಟೆಸ್ಟ್‌ಗೆ ಕರೆದಿದ್ದರು. ಅವರಿಂದ ಕರೆ ಬಂದದ್ದೇ ಈ ನಟಿಗೆ ಹೆಮ್ಮೆ ಎನಿಸಿತು. 'ಅನುರಾಗ್ ನನ್ನ ಕೋರಿಕೆಯನ್ನು ಮನ್ನಿಸಿ ಪಾತ್ರಕ್ಕೆ ಆಹ್ವಾನಿಸುತ್ತಾರೆ ಎಂದು ಮೊದಲು ನಂಬಿಕೆಯೇ ಇರಲಿಲ್ಲ. ಅವರು ಕರೆದರು. ಎಲ್ಲರಂತೆಯೇ ನನ್ನನ್ನೂ ಪರೀಕ್ಷೆಗೆ ಒಡ್ಡಿದರು. ಸ್ಕ್ರೀನ್ ಟೆಸ್ಟ್ ಮಾಡಿದ ಮೇಲಷ್ಟೆ ಅವರು ಆಯ್ಕೆ ಮಾಡಿದ್ದು. ಮೊದಲು ಸತತವಾಗಿ ಯಾವ ಬ್ಯಾನರ್‌ಗಳು ಕೆಲಸ ಕೊಡುತ್ತಿದ್ದವೋ ಅವೇ ನಟಿಸುವಂತೆ ಕರೆಯುತ್ತಿದ್ದವು. ಈಗ ಇನ್ನೂ ಕೆಲವರಿಗೆ ನನ್ನಿಂದ ಅಭಿನಯ ಸಾಧ್ಯವಿದೆ ಎನಿಸಿರುವುದು ಖುಷಿಯ ಸಂಗತಿ' ಎಂದು ಸನ್ನಿ ಪ್ರತಿಕ್ರಿಯಿಸಿದ್ದಾರೆ.

'ಜಿಸ್ಮ್' ಅಲ್ಲದೆ 'ರಾಗಿಣಿ ಎಂಎಂಎಸ್2', 'ಹೇಟ್ ಸ್ಟೋರಿ 2', 'ಏಕ್ ಪಹೇಲಿ ಲೀಲಾ', 'ಕುಚ್ ಲೋಚಾ ಹೈ' ಚಿತ್ರಗಳಲ್ಲಿ ಸನ್ನಿ ಲಿಯೋನ್‌ಗೆ ಅಭಿನಯಿಸುವ ಅವಕಾಶ ಸಿಕ್ಕಿತ್ತು. ■

